ಶ್ರೀ ಅಬ್ದುಲ್‌ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ , ವಕ್ಫ್ಸ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಹೌದು

ಆ)

೧೯೮೪–೮೫	೧೧೪	ಕೊಳವೆ ಬಾವಿಗಳು
೧೯೮೫–೮೬	೭೦	,,
೧೯೮೬–೮೭	೫೬	,,
೧೯೮೭–೮೮	೬೮	,,

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೆ, ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅತ್ಯಂತ ಜನ ಮೆಚ್ಚುಗೆ ಕೆಲಸ ಅಂದರೆ ಕೊಳವೆ ಬಾವಿಗಳಿಂದ ನೀರನ್ನು ಕೊಟ್ಟಿರತಕ್ಕಂಥಾದ್ದು ಈ ಕೊಳವೆ ಬಾವಿಗಳಿಂದ ನೀರನ್ನು ಕೊಟ್ಟಿರುವುದರಿಂದ ಬಹುಶ: ನಮ್ಮನ್ನು, ಜನತಾ ಸರ್ಕಾರವನ್ನು ಡಾಕ್ಟರ್ಸ್ ಎಲ್ಲಾ ಬಯ್ಯುತ್ತಾ ಇದ್ದಾರೆ. ಏಕೆಂದರೆ, ಈ ಕೊಳವೆ ಬಾವಿಗಳ ನೀರು ಅಷ್ಟು ಪರಿಶುದ್ಧವಾದ ನೀರು ಆದುದರಿಂದ ವಂಕ್ಕೆಗೆ ಬರುವ ಸಾಮಾನ್ಯವಾದಂಥ ಕಾಯಿಲೆ ಕಾಲಾರ, ಮಲೇರಿಯಾ, ವಿಷಮಶೀತಜ್ವರ ಇವೆಲ್ಲಾ ನಿಂತು ಹೋಗಿದೆ. ಆದರೆ ಇವತ್ತು ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲಾ ಕೊಳವೆಬಾವಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅದನ್ನು ದುರಸ್ತಿ ಮಾಡಲಿಕ್ಕೆ ಮೊಬೈಲ್ ಯೂನಿಟ್ಸ್ ಎಂದು ಇದೆ, ಅವರನ್ನು ಯಾವಾಗ ಕೇಳಿದರೂ ನಮಗೆ ಡೀಸಲ್ ಇಲ್ಲ, ಸ್ಪೇರ್‌ಪಾರ್ಟ್ಸ್ ಇಲ್ಲ ಎನ್ನತಕ್ಕಂಥ ಕಂಪ್ಲೈಂಟ್ ಹೇಳುತ್ತಾ ಇದ್ದಾರೆ. ನಾವು ಕೊಳವೆ ಬಾವಿ ಕೊಟ್ಟಿದ್ದೇವೆ, ಕೊಟ್ಟಿರುವುದಕ್ಕೆ ತಕ್ಕಹಾಗೆ ನೀರಿನ ಉಪಯೋಗವನ್ನು ಪಡೆದುಕೊಳ್ಳತಕ್ಕಂಥ ಸೌಲಭ್ಯವನ್ನು ನಾವು ಒದಗಿಸದೇ ಹೋದರೆ ಬಹುಶ: ನಮ್ಮ ಹೇಳಿಕೆಯಲ್ಲಿ ವ್ಯತ್ಯಾಸವಾಗುತ್ತದೆ. ಆದುದರಿಂದ ಆತ್ಯಕಡೆ ಹೆಚ್ಚು ಗಮನ ಕೊಡಬೇಕು ಆದನ್ನು ರೀಪೆರಿ ಮಾಡಿಸಲಿಕ್ಕೆ ಹೆಚ್ಚು ಆದ್ಯತೆ ಕೊಡಬೇಕು ಎಂದೂ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ, ಅಗತ್ಯವಾಗಿ ಮಾಡೋಣ.

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೆ, ಹಳ್ಳಿಗಾಡಿನಲ್ಲಿ ನಾವು ಕೊಳವೆಬಾವಿಗಳನ್ನು ಕೊಟ್ಟಿದ್ದೇವೆ. ಪಟ್ಟಣ ಪ್ರದೇಶಗಳಲ್ಲೂ ಕೂಡ ಇಂತಹ ಕೊಳವೆಬಾವಿಗಳು ಎಲ್ಲಿ ಅವಶ್ಯಕತೆ ಇರುತ್ತದೆ ಅಲ್ಲಿ ಸಬ್‌ಮರ್ಸಿಬಲ್ ಪಂಪ್ ಎಂದು ಹಾಕುತ್ತಾ ಇದ್ದಾರೆ. ಅಲ್ಲೂ ಕೂಡ ಹೆಚ್ಚಿನ ಆದ್ಯತೆ ಕೊಡಬೇಕು. ನಾನು ಮೊದಲು ಒಂದು ಸಾರಿ ನಂಜನಗೂಡು ತಾಲ್ಲೂಕಿನ ಬಗ್ಗೆ ಹೇಳಿದೆ. ನಂಜನಗೂಡು ಪಟ್ಟಣದಲ್ಲಿ ಅತಿ ಪಕ್ಕದಲ್ಲಿ ನದಿ ಇದ್ದರೂ ಕೂಡ ನಮಗೆ ಸಾಕಷ್ಟು ನೀರಿನ ಸೌಲಭ್ಯವಿಲ್ಲ. ಕೆಲವು ಕಡೆ ಸಬ್ ಮರ್ಸಿಬಲ್ ಪಂಪ್ ಕೊಟ್ಟು ನೀರನ್ನು ಕೊಡಬೇಕು ಎಂದು ಹೇಳಿದ್ದ ಮಾನ್ಯ ಸಚಿವರಿಗೆ ಇದು ಸುಮಾರು ಬಾರಿ ಒತ್ತಾಯ ತರುತ್ತಾ ಇರುವುದು ಇದ್ದರಿಂದ ಇನ್ನು ಮುಂದಾದರೂ ಕೂಡ ಅದರ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಅದಕ್ಕೆ ಆದ್ಯತೆ ಕೊಡಬೇಕು ಎಂದೂ ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ.

ಕನಕಗಿರಿಯಲ್ಲಿ ಕುಡಿಯುವ ನೀರಿನ ಸರಬರಾಜು

೨೩೦ ಶ್ರೀ ರಂಗ ದೇವರಾಯಲು (ಕನಕಗಿರಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ಸ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಷ್ಟಗಿ ತಾಲ್ಲೂಕಿನ ಕಲವಂಳ್ಳಿ ಹಾಗೂ ಮೇಣದಾಳು, ಗಂಗಾವತಿ ತಾಲ್ಲೂಕಿನ ಕಾರಟಗಿ, ಮರುಲಹಳ್ಳಿ ಹಾಗೂ ಕನಕಗಿರಿ ಮತ್ತು ಸಿಂಧನೂರು ತಾಲ್ಲೂಕಿನ ತುರುವೀಹಾಳ್ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜು ಕೆಲಸ ಸಮರ್ಪಕವಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಸದರಿ ಗ್ರಾಮಗಳಲ್ಲಿನ ಸಣ್ಣ ಪ್ರಮಾಣದ (ಮಿನಿವಾಟರ್ ವರ್ಕ್ಸ್) ಕುಡಿಯುವ ನೀರು ಸರಬರಾಜಿನ ಕಾಮಗಾರಿಯು ನಡೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಕೂಡಲೇ ಕೈಗೊಳ್ಳುವಂತೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವರ್ಕ್ಸ್ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಇಲ್ಲ.

ಆ) ತುರುವೀಹಾಳ್ ಗ್ರಾಮ ಬಿಟ್ಟರೆ ಉಳಿದ ಐದು ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆ ಇರುವುದಿಲ್ಲ. ತಿರುವಿಹಾಳ್ ಗ್ರಾಮದ ಕಿರು ನೀರು ಸರಬರಾಜು ಯೋಜನೆಯನ್ನು ೧೯೮೫ ರಲ್ಲಿ ಪೂರ್ಣಗೊಳಿಸಿ ನೀರು ಸರಬರಾಜು ಆಗುತ್ತಿದೆ.

ಇ) ಕಳಮಳ್ಳಿ ಮೇಣದಾಳು, ಕಾರಟಗಿ, ಮರುಳ ಹಳ್ಳಿ, ಕನಕಗಿರಿ ಗ್ರಾಮಗಳಲ್ಲಿ ಎನ್‌ಆರ್ ಡಬ್ಲ್ಯೂಎಸ್ ಯೋಜನೆಗಳನ್ನು ಮಂಜೂರು ಮಾಡಲಾಗಿದೆ. ಕೆಲಸ ವಿವಿಧ ಹಂತದಲ್ಲಿದ್ದು, ಪ್ರಗತಿಯಲ್ಲಿದೆ. ಇವುಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಶ್ರೀ ಶ್ರೀರಂಗದೇವರಾಯಲು.—ಮಾನ್ಯ ಅಧ್ಯಕ್ಷರೆ, ೧೯೮೪ರಲ್ಲಿ ಮಂಜೂರಾಗಿದೆ. ಆದರೆ, ಇನ್ನೂ ಕೆಲಸ ಮುಗಿದಿಲ್ಲ, ಎಷ್ಟು ವರ್ಷದಲ್ಲಿ ಕೆಲಸ ಮುಗಿಸುತ್ತೀರಿ ? ವಾಟರ್ ಸಪ್ಲೈ ಕೆಲಸ ೪ ವರ್ಷ ವಾದರೂ ಮುಗಿಯದೇ ಇದ್ದರೆ, ಹೇಗೆ ? ಇನ್ನು ಮೇಲಾದರೂ ಹೆಚ್ಚು ನಿಗಾವಹಿಸಿ ಕೆಲಸ ಮಾಡಿ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀರಂಗದೇವರಾಯಲು ಅವರು ಹೇಳಿದ್ದಾರೆ ಬೇಗ ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಕೊರೆಯಲಾದ ಕೊಳವೆ ಬಾವಿಗಳು

೧೫೩೨. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವರ್ಕ್ಸ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆವಿಗೆ ಕೊರೆಯಲಾಗಿರುವ ಕುಡಿಯಲು ನೀರಿನ ಕೊಳವೆ ಬಾವಿಗಳೆಷ್ಟು ?

ಆ) ಆ ಪೈಕಿ ಹಾಲಿ ಕೆಲಸ ಮಾಡುತ್ತಿರುವ ಮತ್ತು ಕೆಟ್ಟು ಹೋಗಿರುವ ಭಾವಿಗಳೆಷ್ಟು ?

ಇ) ೧೯೮೭-೮೮ನೇ ಸಾಲಿನಲ್ಲಿ ಕೊರೆಯಲಾಗಿರುವ ಕೊಳವೆ ಭಾವಿಗಳೆಷ್ಟು ? ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಈ) ಸದರೀ ವೆಚ್ಚದಲ್ಲಿ ರಾಜ್ಯ ಸರ್ಕಾರದವರಿಂ ಖರ್ಚು ಮಾಡಿರುವ ಹಣವೆಷ್ಟು ಹಾಗೂ ಕೇಂದ್ರ ಸರ್ಕಾರದವರು ನೀಡಿರುವ ಗ್ರ್ಯಾಂಟ್ ಹಣವೆಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ವರ್ಕ್ಸ್ ಮತ್ತು ಪಶುಸಂಗೋಪನ ಮಂತ್ರಿಗಳು).—

ಅ) ೧,೨೩,೫೩೧ ಇವುಗಳ ಪೈಕಿ ೧೦೬೯೫೧ ಭಾವಿಗಳು ಸಫಲವಾಗಿದ್ದವು.

ಆ) ಹಾಲಿ ಕೆಲಸ ಮಾಡುತ್ತಿರುವ ಕೊಳವೆ ಭಾವಿಗಳ ಸಂಖ್ಯೆ ೧,೦೪.೮೧೩ ಕೆಟ್ಟು ಹೋಗಿರುವ ಭಾವಿಗಳು ೨೧೩೮.

ಇ) ೫೨೪೦ ಕೊಳವೆ ಭಾವಿಗಳು ವೆಚ್ಚ ರೂ. ೯೩೮.೨೧ ಲಕ್ಷ.

ಈ) ರಾಜ್ಯ ಸರ್ಕಾರ ರೂ. ೬೧೨.೦೦ ಲಕ್ಷ ಕೇಂದ್ರ ಸರ್ಕಾರದ ರೂ. ೩೨೬.೨೧ ಲ ಗ್ರ್ಯಾಂಟ್.